ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.
E-mail:eepwdspecialmysuru@gmail.com Phone No. & Fax No. 0821 2492297

ನಂ.ಕಾಇಂ:ಲೋಇ:ವಿವಿ:ಮೈ:ಸಇಂ-2:ಕಟ್ಟಡ ಸುರಕ್ಷತೆ:2023-24 266-67 ದಿನಾಂಕ ;
26/05/23

ರವರಿಗೆ

ಕಾರ್ಯದರ್ಶಿಗಳು,
ಸಿ.ಎಫ್.ಟಿ.ಆರ್.ಐ
ಎಜುಕೇಷನ್ ಸೊಸೈಟಿ,
ಯಾದವಗಿರಿ,
ಮೈಸೂರು.

ಮಾನ್ಯರೇ,

ವಿಷಯ: ಮೈಸೂರು ನಗರದ ಯಾದವಗಿರಿ ಚೆಲುವಾಂಬಾ ಪಾರ್ಕ್ ಎದುರು ಇರುವ ಸಿ.ಎಫ್.ಟಿ.ಆರ್.ಐ ಶಾಲಾ ಕಟ್ಟಡಕ್ಕೆ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ:
1. ತಮ್ಮ ಮನವಿ ಪತ್ರ ದಿನಾಂಕ: 15.05.2023
2. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರು ಇವರ ಕಛೇರಿ ಪತ್ರ ಸಂಖ್ಯೆ: 109 ದಿ: 20.05.2023
3. ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ: ಇಡಿ:43:ಪಿಜಿಸಿ:2022 ದಿನಾಂಕ: 18.05.2022

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ಕಾರ್ಯದರ್ಶಿಗಳು, ಸಿ.ಎಫ್.ಟಿ.ಆರ್.ಐ, ಎಜುಕೇಷನ್ ಸೊಸೈಟಿ, ಯಾದವಗಿರಿ, ಮೈಸೂರು ರವರ ಕೋರಿಕೆಯಂತೆ "ಯಾದವಗಿರಿ ಚೆಲುವಾಂಬಾ ಪಾರ್ಕ್ ಎದುರು ಇರುವ ಸಿ.ಎಫ್.ಟಿ.ಆರ್.ಐ ಶಾಲಾ" ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ಕೋರಿರುತ್ತಾರೆ ಎಂದು ತಿಳಿಸಿ, ಸದರಿ ಶಾಲಾ ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಿರುತ್ತಾರೆ.

ಮೈಸೂರಿನ "ಯಾದವಗಿರಿ ಚೆಲುವಾಂಬಾ ಪಾರ್ಕ್ ಎದುರು ಇರುವ ಸಿ.ಎಫ್.ಟಿ.ಆರ್.ಐ ಶಾಲಾ" ಕಟ್ಟಡವನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರು ರವರು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ದಿನಾಂಕ:18.05.2023 ರಂದು ಜಂಟಿಯಾಗಿ ಪರಿವೀಕ್ಷಿಸಲಾಗಿದ್ದು, ಕಟ್ಟಡವು ಸುಸ್ಥಿತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ. ಕಟ್ಟಡವು ನೆಲ + 2 ಅಂತಸ್ತುಗಳನ್ನು ಒಳಗೊಂಡಿದ್ದು, ಸದರಿ ಕಟ್ಟಡದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

ಮುಂದುವರೆದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಗುಣಭರವಸೆ ಉಪವಿಭಾಗ, ಮೈಸೂರು ರವರು ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ದಿ:28.03.2023 ರಂದು ಸದರಿ ಕಟ್ಟಡದ Ultrasonic Pulse Velocity Test and Rebound hammer Test ಮಾಡಿ ವರದಿಯನ್ನು ನೀಡಿರುತ್ತಾರೆ. ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುತ್ತದೆ.

ಮು.ತಿ.ನೋ

Principal
CFTRI School
MYSORE.

Hon. Secretary
CFTRI Education Society (R)
Yadavagiri, MYSURU-570 020
(English Medium)

- Recognizance, visual inspection of Building-cracks, distress, dampness etc. ಪರೀಕ್ಷೆಯನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಗುಣಭರವಸೆ ಉಪವಿಭಾಗ, ಮೈಸೂರು ರವರ ಜೊತೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದೊಂದಿಗೆ ಕೈಗೊಳ್ಳಲಾಗಿರುತ್ತದೆ. ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುತ್ತದೆ.

ಕಾರ್ಯದರ್ಶಿಗಳು, ಸಿ.ಎಫ್.ಟಿ.ಆರ್.ಐ, ಎಜುಕೇಷನ್ ಸೊಸೈಟಿ, ಯಾದವಗಿರಿ, ಮೈಸೂರು, ಮೈಸೂರುರವರು, ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ:ಇಡಿ:43:ಪಿಜಿಸಿ:2022 ದಿನಾಂಕ: 18.05.2022 ಆದೇಶದಂತೆ ನಗರ ಪ್ರದೇಶದ ಕಾಲೇಜಿಗೆ ರೂ.5,000/- ಶುಲ್ಕವನ್ನು ದಿನಾಂಕ:20.05.2023 ರಂದು ಯೂನಿಯನ್ ಬ್ಯಾಂಕ್, ಬೋಗಾದಿ ಶಾಖೆ, ಮೈಸೂರು, ಡಿ.ಡಿ.ಸಂಖ್ಯೆ:602591 ರಲ್ಲಿ ರೂ.5,000.00 ಗಳನ್ನು ಲೆಕ್ಕಶಾಖೆಗೆ ಪಾವತಿಸಿರುತ್ತಾರೆ. ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ **ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಗುಣಭರವಸೆ ಉಪವಿಭಾಗ, ಮೈಸೂರು** ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಹಾಗೂ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದವರು ಪರಿಶೀಲಿಸಲಾಗಿ ಕಟ್ಟಡವು **"Structurally Stable"** ಇರುವುದಾಗಿ ಪರೀಕ್ಷಾ ವರದಿಗಳಿಂದ ಕಂಡು ಬಂದಿರುತ್ತದೆ. ಫೈರ್ ಸೇಫ್ಟಿಗೆ ಸಂಬಂಧಿಸಿದಂತೆ ದಿನಾಂಕ:18.04.2023 ರಲ್ಲಿ ಫೈರ್ ಸೇಫ್ಟಿ ಪ್ರಮಾಣ ಪತ್ರ ನೀಡಲಾಗಿರುತ್ತದೆ. ಸದರಿ ಕಟ್ಟಡಕ್ಕೆ 2023-24ನೇ ಶೈಕ್ಷಣಿಕ ಸಾಲಿಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
ವಿಶೇಷ ವಿಭಾಗ, ಮೈಸೂರು

Theresa
Principal
CFTRI School
MYSORE.

Hon. Secretary
CFTRI Education Society (R)
Yadavagiri, MYSURU-570 020
(English Medium)